APPENDIX F.

Concluding Speeches.

ಈ ವರ್ಷದ ದಸರಾ ಪ್ರಜಾಪ್ರತಿನಿಧಿ ಸಭಾ ಕಾರ್ಯವು 1914ನೆಯ ಇಸವಿ ಅಕ್ಟೋಬರ್ 7ನೆಯ ತಾರೀಖಿನದಿನ ಪೂರೈಸಿತು. ವಿಷಯಗಳ ಚರ್ಚೆಯು ಪೂರಯಿಸಿದ ಕೂಡಲೆ ಮೆ॥ ರಾ॥ ಅಂಬ್ಳೆ ಅಣ್ಣಯ್ಯ ಪಂಡಿತರೂ, ಮೆ॥ ರಾ॥ ಸಿ. ವಾಸುದೇವರಾವ್‌ರವರೂ, ಮೆ॥ ರಾ॥ ಎಚ್. ಕೃಷ್ಣಶಾಸ್ತ್ರಿಗಳವರೂ, ಉಚಿತವಾದ ವಾಕ್ಯಗಳಲ್ಲಿ, ಪ್ರತಿನಿಧಿಗಳ ಪಕ್ಷವಾಗಿ ದಿವಾಣರವರನ್ನು ವಂದಿಸಿದರು. ಇದಾದಬಳಿಕ ದಿವಾಣರವರು ಕೆಲವು ಉಪಸಂಹಾರವಾಕ್ಯಗಳನ್ನು ನುಡಿದು ಸಭೆಯನ್ನು ಭರ್ಖಾಸ್ತು ಮಾಡಿದರು. ಅವರವರು ಹೇಳಿದ ಅಭಿಪ್ರಾಯಗಳನ್ನು ಸಂಗ್ರಹವಾಗಿ ಇದರಡಿ ತಿಳಿಸಲಾಗಿದೆ.

ಅಂಬ್ಳೆ ಅಣ್ಣಯ್ಯಪಂಡಿತರು.—"1881ನೆಯ ಇಸವಿಯಲ್ಲಿ ಮೈಸೂರು ಸಂಸ್ಥಾನದ ಆಳಿಕೆಯನ್ನು ಬ್ರಿಟಿಷ್ ಸರ್ಕಾರದವರು ಶ್ರೀಮಂ ಮಹಾರಾಜರವರಿಗೆ ವಹಿಸಿಕೊಟ್ಟನಂತರ, ದಿವಾ ರಂಗಾಚಾರ್ಯರವರು ಈ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದರು. ರಾಜ್ಯದ ಆಡಳಿತವನ್ನು ಪ್ರಜೆಗಳಿಗೆ ತಿಳಿಯಪಡಿಸಿ ಅವರುಗಳ ಅಭಿಪ್ರಾಯವನ್ನು ಅರಿಯಬೇಕೆಂಬುವದೇ ಅವರ ಉದ್ದೇಶ. ದಿವಂಗತರಾದ ನಮ್ಮ ಶ್ರೀಮಂ ಮಹಾರಾಜ ಶ್ರೀ ಚಾಮರಾಜೇಂದ್ರ ಒಡೆಯರವರೂ, ಅವರ ಅನಂತರ ಮಹಾ ಮಾತೃ ಶ್ರೀ ಮಹಾರಾಣಿ ರೀಜಂಟ್‌ರವರೂ ರಾಜ್ಯವನ್ನಾಳುತ್ತಾ, ಪ್ರಜೆಗಳಿಗೆ ಅನೇಕ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರು. 1902ನೆಯ ಇಸವಿಯಲ್ಲಿ ನಮ್ಮ ಆಳಿದ ಮಹಾಸ್ವಾಮಿಯವರಿಗೆ ಪಟ್ಟಾಭಿಷೇಕವಾಯ್ತು. ಆಗ ವೈಸ್‌ರಾಯಿಯವರಾಗಿದ್ದ ಲಾರ್ಡ್ ಕರ್ಜನ್‌ರವರು ಖುದ್ದಾಗಿ ದಯೆಮಾಡಿ, ಈ ವುತ್ಸವವನ್ನು ನೆರವೇರಿಸಿ, ರಾಜ್ಯದ ಅಭಿವೃದ್ಧಿಸ್ಥಿತಿಯನ್ನು ಕುರಿತು ಕೊಂಡಾಡಿದರು.

ತಾವು ದ್ವೀಪಾಂತರಗಳಲ್ಲಿ ಸಂಚಾರಮಾಡಿ ಅನೇಕ ವಿಷಯಗಳನ್ನು ತಿಳಿದುಕೊಂಡು ನಮ್ಮ ಸಂಸ್ಥಾನಕ್ಕೆ ದಿವಾಣರಾಗಿ ಬಂದಾರಭ್ಯ, ದೇಶೋನ್ನತಿಗೆ ಅವಶ್ಯಕವಾದ ಸಂಪದಭಿವೃದ್ಧಿ ಸಮೋಜವೇ ಮೊದಲಾದ ಏರ್ಪಾಡುಗಳನ್ನು ಮಾಡಿಸುತ್ತಿರೋಣವಾಗಿದೆ. ಇದು ನಮ್ಮ ಭಾಗ್ಯವೇಸರಿ. ತಮ್ಮ ರಾಜತಂತ್ರ ವಿಶಾರದತ್ವ, ವಿನಯ, ತಿಳಿವಳಿಕೆ ಮೊದಲಾದ ಗುಣಗಳನ್ನುಕುರಿತು ಎಷ್ಟುಹೇಳಿದರೂ ಕಮ್ಮಿಯೇ. ಹೋದವರ್ಷ ಇಕಂಟ್ಯಾಕ್ಸ್ ಹಾಕುವ ವಿಷಯದಲ್ಲಿ ಒಬ್ಬರೂ ಒಪ್ಪಲಿಲ್ಲ. ಈ ವರ್ಷ ಬಹುಮಂದಿ ಅಂಗೀಕರಿಸಿದ್ದನ್ನು ನೋಡಿದರೆ, ತಮ್ಮ ರಾಜತಂತ್ರ ವಿಶಾರದತ್ವವೇ ಇದಕ್ಕೆ ಕಾರಣವೆಂದು ಹೇಳಲು ಸಂದೇಹವಿಲ್ಲ.

ನಮ್ಮ ಮಹಾರಾಜರವರು ತಮ್ಮ ಸಹೋದರರನ್ನು ಯೂರೋಪ್‌ಖಂಡದ ಅನೇಕ ದೇಶಗಳಿಗೆ ಕಳುಹಿಸಿ ಇದ್ದದ್ದಲ್ಲದೆ, ಅವರನ್ನು ಕೌನ್ಸಿಲರನ್ನಾಗಿಯೂ ಮಾಡಿರುವದರಿಂದ, ಪ್ರಜೆಗಳ ವಿಷಯದಲ್ಲಿಯೂ ರಾಜ್ಯಾಡಳಿತದಲ್ಲಿಯೂ ಅವರಿಗಿರ್ಪತೆಕ್ಕ ಅತ್ಯಂತ ಆಸಕ್ತಿಯು ವ್ಯಕ್ತಪಡುತ್ತೆ.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧಕ್ಕಾಗಿ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ನಮ್ಮ ಮಹಾರಾಜರವರು ಐವತ್ತೈರಡು ಲಕ್ಷ ರೂಪಾಯಿನವರೆಗೂ ಮಾಡಿರುವ ದ್ರವ್ಯ ಸಹಾಯವು ಅವರ ಔದಾರ್ಯವನ್ನು ಸೂಚಿಸುತ್ತದೆ.

ಸರ್ಕಾರದ ಆದಾಯ ವೆಚ್ಚದ ವಿಷಯದಲ್ಲಿ ಪ್ರಜೆಗಳ ಸಲಹೆಗಳನ್ನು ತೆಗೆದುಕೊಳ್ಳುವೆದಕ್ಕೆ ತಾವು ಮಾಡಿರುವ ಏರ್ಪಾಡು ಎಲ್ಲರಿಗೂ ಸಂತೋಷಕರವಾಗಿದೆ.

ನಮ್ಮ ಮಹಾರಾಜರವರಿಗೆ ತಮ್ಮಲ್ಲಿರುವ ನಂಬಿಕೆಯೂ ಮತ್ತು ವಿಶ್ವಾಸವೂ ನಮ್ಮ ರಾಜ್ಯದ ಏಳಿಗೆಗೂ ನಮ್ಮ ಪುರೋವೃದ್ಧಿಗೂ ಕಾರಣಭೂತವಾಗಿವೆ.

ನಮ್ಮ ಮಹಾರಾಜರವರಿಗೂ, ಯುವರಾಜರವರಿಗೂ, ತಮಗೂ ದೀರ್ಘಾಯುಸ್ಸನ್ನು ಭಗವಂತನು ದಯೆ ಪಾಲಿಸಲಿ ಎಂಬದಾಗಿ ಪ್ರಾರ್ಥಿಸುತ್ತೇನೆ."

Translation of the above.

The Session of the Dasara Representative Assembly came to a close on Wednesday the 7th October 1914. At the close of the discussion of the subjects, Messrs. Amble Anniah Pandit, C. Vasudeva Rao and H. Krishna Sastri thanked the Dewan on behalf of the members in suitable terms and this was followed by a few concluding remarks made by the Dewan. The following is a summary of the observations made by the several speakers.

Mr. Amble Anniah Pandit.—"It was in 1881 immediately after the Rendition that Mr. C. V. Rangacharlu, the then Dewan, established the Representative Assembly with the object of laying annually before His Highness' subjects an outline of the previous year's administration of the State and giving them an opportunity of expressing their opinion on it. During the reign of our beloved Maharaja the late Sri Chamarajendra Wodeyar, and the Regency of Her Highness the Maharani Mother, C.I. many blessings were conferred on the subjects of this State. In 1902 our present beloved Maharaja Sri Krishnarajendra Wodeyar Bahadur was installed on his ancestral throne and on this occasion Lord Curzon, the then Viceroy of India was present and conducted the high solemnity of the installation in person. His Excellency was pleased on this occasion to express himself in laudatory terms on the progress achieved by the State.

Ever since your elevation to the Dewanship of this State, your experience, and the wisdom gained by your extensive observation in foreign travel has resulted in the institution of the Economic Conference and other beneficial measures calculated to secure the advancement of our country. These have been indeed a blessing to us and we can never sufficiently applaud your statesmanlike breadth of vision, and your knowledge of men and affairs. Though last year, not one would agree to the imposition of the income tax, yet your tact and statesmanlike persuasion secured the support of a considerable number for the measure this year.

The extraordinary interest which His Highness takes in the welfare of the State and the people is clearly indicated by the fact that he not only sent his own beloved brother to Europe on deputation but also appointed him an Extraordinary Member of the Executive Council on his return.

The magnificent contribution of 52 lakhs of rupees made by His Highness towards the war in which the British Empire is now involved in Europe is an expression of his characteristic generosity.

The various reforms you have introduced for knowing the views of the people about the income and expenditure of the State, have given satisfaction to one and all.

The implicit confidence and affection which His Highness has reposed in you are certainly conducive to the progress of the State and the welfare of the people.

We earnestly pray that the Almighty may bless His Highness the Maharaja, His Highness the Yuvaraja and yourself with long life and prosperity."

ಮಿ॥ರಾ॥ ವಾಸುದೇವರಾಯರು. —"ಜನಗಳು ಉತ್ಸಾಹದಿಂದ ಗ್ರಾಮಾಭಿವೃದ್ಧಿಯ ಕೆಲಸದಲ್ಲಿ ಪ್ರವರ್ತಿಸಿರುವದು ಬಹಳ ಸಂತೋಷ ಸೂಚಕವಾಗಿದೆ. ಮುಂದೆಯೂ ಇದೇರೀತಿಯಾಗಿ ನಡಿಸುವುದರಲ್ಲಿ ಸಂದೇಹವಿಲ್ಲ. ಗ್ರಾಮ ಮತ್ತು ಪಟ್ಟಣವೆಂಬ ವೈತ್ಯಾಸವಿಲ್ಲದೆ ಎಲ್ಲಾ ಸ್ಥಳಗಳಲ್ಲಿಯೂ ಇದೇರೀತಿಯಾಗಿ ನಡಿಸತಕ್ಕದ್ದು ಯುಕ್ತವಾಗಿ ಕಾಣುತ್ತದೆ.

ಎಕನಾಮಿಕ್ ಕಾನ್‌ಫರೆನ್ಸಿನಿಂದ ಜನಗಳಿಗೆ ಒಳ್ಳೆಯದಾಗುತ್ತದೆಂಬುವುದರಲ್ಲಿ ಸಂದೇಹವಿಲ್ಲ; ಆದರೆ ಈ ವಿಷಯದಲ್ಲಿ ಕೆಲವರಿಗೆ ಭಿನ್ನಾಭಿಪ್ರಾಯ ವುಂಟಾಗಿದ್ದರೂ, ತಮ್ಮ ರಾಜತಂತ್ರ ವಿದ್ಯಾಕುಶಲತೆಗಳ ಮೂಲಕ ಎಲ್ಲರೂ ಏಕಾಭಿಪ್ರಾಯವುಳ್ಳವರಾಗಿ ಕೆಲಸ ನಡೆಸುವುದರಲ್ಲಿ, ಈ ವೈತ್ಯಾಸಗಳೆಲ್ಲಾ ನಿವೃತ್ತಿಯಾಗಬಹುದೆಂದು ನಂಬುತ್ತೇವೆ.

ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಕಾಲೇಜುಗಳಲ್ಲಿ ಸ್ಥಳ ಸಿಕ್ಕದೆ ಹೋಗೋಣದರಿಂದ ಉಂಟಾಗುವ ಅನಾನುಕೂಲ್ಯವೆನ್ನು ಪರಿಹರಿಸುವುದಕ್ಕೆ ತಕ್ಕ ವಿಚಾರಣೆಯನ್ನು ಮಾಡುವುದಾಗಿ ಭರವಸೆಯನ್ನು ಕೊಟ್ಟದ್ದು ತುಂಬ ಸಂತೋಷವೆನ್ನುಂಟುಮಾಡಿದೆ. ಪರೀಕ್ಷೆಯಲ್ಲಿ ತೇರ್ಗಡೆಯಾದವರ ಹೆಸರುಗಳನ್ನು ಫ್ರೀ ಯಿಷ್ ಮಾಡುವುದಾಗಿ ಅಪ್ಪಣೆ ಕೊಡಿಸಿದ್ದಕ್ಕೆ ಎಲ್ಲರೂ ಕೃತಜ್ಞರಾಗಿದ್ದಾರೆ.

ಜಾಗ್ರತೆಯಲ್ಲಿ ಈ ಸಂಸ್ಥಾನಕ್ಕೆ ಬಂದು ಯೂನಿವರ್ಸಿಟಿಯಾಗುತ್ತೆಂಬ ವಿಷಯವು ಅತ್ಯಂತ ಸಂತೋಷವನ್ನುಂಟುಮಾಡಿರುತ್ತದೆ.

ಈ ಸಭೆಯಲ್ಲಿ ಮೆಂಬರುಗಳು ಕೆಲವುವೇಳೆ ಅಸಮಾಧಾನಕರವಾದ ಮಾತುಗಳನ್ನು ಆಡಿದ್ದಾಗ್ಗೂ ತಾವು ಅದನ್ನು ಗಮನಿಸದೆ ಕ್ಷಮಿಸಬೇಕೆಂದು ಕೋರುತ್ತೇವೆ.

ರಾಜ್ಯದ ಆದಾಯ ಮತ್ತು ಖರ್ಚಿನ ವಿಷಯವನ್ನು ಚರ್ಚಿಸುವುದಕ್ಕೆ ಪ್ರಜೆಗಳಿಗೆ ಅವಕಾಶಕೊಟ್ಟಿರೋದರಿಂದ ಈ ವಿಷಯದಲ್ಲಿ ಸರ್ಕಾರದವರಿಗೆ ಅಶ್ರದ್ಧೆ ಉಂಟಾದೀತೇನೋ ಎಂಬುದಾಗಿ ಕೆಲವರು ಶಂಕಿಸುತ್ತಾರೆ. ಅಂಥಾದ್ದಕ್ಕೆ ಕಾರಣವೇನೂ ಇಲ್ಲ.

ನಮ್ಮ ವಿನಯಪೂರ್ವಕವಾದ ವಿಜ್ಞಾಪನೆಗಳನ್ನು ಶ್ರೀಮನ್ ಮಹಾರಾಜರವರಿಗೆ ತಿಳಿಯಪಡಿಸಬೇಕೆಂದು ಪ್ರಾರ್ಥಿಸುತ್ತೇವೆ."

Translation of the above.

Mr. C. Vasudeva Rao.—"It is gratifying to note that the people have begun to take interest in the Village Improvement Scheme and it is hoped that they will continue to do so. It is desirable that no distinction should be made between a village and a town as far as the works of improvement are concerned.

The benefits of the Economic Conference have been established beyond all doubt. Even if there be some persons who hold a different opinion about it, it is hoped that their objections will be overcome, and their harmonious co-operation secured by your administrative skill.

We rejoice at your assurance that the inconvenience felt by students who successfully pass the School Final Examination but fail to secure seats in the colleges will be remedied. We are grateful for the promise you made regarding the publication of the names of the successful candidates.

We feel extremely glad to hear that in a short time a separate University will be established for the Province.

If any of the members of this Assembly have at any time let fall unpleasant or objectionable remarks, they may be kindly overlooked and excused.

It is feared by some that the concession to the people of the power of discussing the budget of income and expenditure of the State may lead to indifference on this subject on the part of Government but such apprehensions are undoubtedly baseless.

In conclusion we beg that our loyal sentiments may be kindly conveyed to His Highness the Maharaja."

ಮೆ॥ ರಾ॥ ಕೃಷ್ಣ ಶಾಸ್ತ್ರಿಗಳು.—"ಮೆ॥ ರಾ॥ ಅಂಬ್ಳೆ ಅಣ್ಣಯ್ಯ ಪಂಡಿತರೂ, ಕಾಫಿಪ್ಲಾಂಟರ್ ಮೆ॥ ರಾ॥ ವಾಸುದೇವರಾಯರೂ ಸಂಪದಭಿವೃದ್ಧಿ ಸಮಾಜವೇ ಮೊದಲಾದ ಅನೇಕ ವಿಷಯಗಳನ್ನೂ ಹೇಳಿರುತ್ತಾರೆ. ಆದರೂ ರೈತಾಬಿ ಜನಗಳ ಪರವಾಗಿ ಬಂದು ಮುಖ್ಯವಾದ ವಿಷಯವೆನ್ನು ಹೇಳತಕ್ಕದ್ದು ನನ್ನ ಕರ್ತವ್ಯವಾಗಿದೆ. ಅನೇಕ ವರ್ಷಗಳಿಂದ ಚರ್ಚೆಯಲ್ಲಿದ್ದ ಮೈನರ್ ಕೆರೆಗಳು ಆಬಾದಾಗತಕ್ಕ ವಿಷಯವು ತಮ್ಮ ಕಾಲದಲ್ಲಿ ತೀರ್ಮಾನಕ್ಕೆ ಬಂದಿರುವದು ಸಂತೋಷಕರವಾಗಿದೆ. ರೈತರ ಅನುಕೂಲತೆಯನ್ನೇ ಮುಖ್ಯೋದ್ದೇಶವಾಗಿಟ್ಟುಕೊಂಡು ಅಂಥಾ ಕೆರೆಗಳನ್ನು ಮುಂದೆ ಆಬಾದಿಗೆ ತರುವದಕ್ಕಾಗಿ ತಾವು ಉದ್ದೇಶಿಸಿರುವ ಏರ್ಪಾಡು ಸರ್ವ ಸಮ್ಮತವಾಗಿದೆ. ಇದರಿಂದ ಅನೇಕ ಕೆರೆಗಳು ಆಬಾದಿಗೆ ಬಂದು ರೈತರ ಸ್ಥಿತಿ ಅಭಿವೃದ್ಧಿಯಾಗುವದರಲ್ಲಿ ಸಂದೇಹವಿಲ್ಲ. ಇದಕ್ಕಾಗಿ ತುಂಬ ಕೃತಜ್ಞರಾಗಿದ್ದೇವೆ.

ಇಕಂಟ್ಯಾಕ್ಸು ಹಾಕುವದಕ್ಕೆ ಬಹುಮಂದಿ ಒಪ್ಪಿರುವದರಿಂದ ಎಲ್ಲರೂ ಒಪ್ಪಿದಂತೆಯೇ ಆಯಿತು. ಎಂದಿಗಿದ್ದರೂ ಈ ತೆರಿಗೆಯು ರಾಜ್ಯಾದಾಯಕ್ಕೆ ಸೇರತಕ್ಕದ್ದೇ ಆದರೂ ತಾವು ಉದಾರ ಮನಸ್ಸಿನಿಂದ ಈ ವರಮಾನವನ್ನು ಪ್ರಜೆಗಳ ವಿದ್ಯಾಭಿವೃದ್ಧಿಗಾಗಿಯೇ ವೆಚ್ಚ ಮಾಡುವದಾಗಿ ವಾಗ್ದಾನ ಮಾಡಿರುವದಕ್ಕೆ ನಾವು ಬಹಳ ಕೃತಜ್ಞರಾಗಿದ್ದೇವೆ.

ತಾವು ಗ್ರಾಮಗಳ ಅಭಿವೃದ್ಧಿಗಾಗಿ ಮಾಡಿರುವ ಏರ್ಪಾಡಿನಿಂದ ಎಲ್ಲಾ ಗ್ರಾಮಗಳೂ ಜಾಗ್ರತೆಯಾಗಿ ಪಟ್ಟಣಗಳಾಗುವದರಲ್ಲಿ ಸಂದೇಹವಿಲ್ಲ. ಪ್ರಜೆಗಳು ಈ ವಿಷಯದಲ್ಲಿ ಶ್ರದ್ಧೆಯಿಂದಲೂ, ಐಕಮತ್ಯದಿಂದಲೂ ಕೆಲಸ ನಡೆಸುವರೆಂದು ದೃಢವಾಗಿ ಹೇಳುತ್ತೇನೆ.

ತಮ್ಮಲ್ಲಿ ಪ್ರಜೆಗಳಿಗಿರುವ ಅನುರಾಗವನ್ನು ಕುರಿತು ತಾವು ಕಳದವರ್ಷ ಹೇಳಿದ್ದರಲ್ಲಿ, ಪ್ರಥಮ ವರ್ಷವಾದ್ದರಿಂದ ಸ್ತೋತ್ರ ಮಾಡುವದು ನಮಗೆ ಸಹಜವೆಂದು ತಾವು ಅಭಿಪ್ರಾಯ ಪಟ್ಟಿರುವಂತೆ ಕಾಣುತ್ತೆ. ಆದರೆ ಹೋದ ವರ್ಷದಂತೆಯೇ ಈಗಲೂ ಪ್ರಜೆಗಳು ಬಂದೇ ರೀತಿಯಾಗಿ ಅನುರಾಗವುಳ್ಳವರಾಗಿರುವದರಿಂದ, ಇದಕ್ಕೆ ತಾವು ಸ್ವದೇಶಿಗಳಾಗಿ ದೇಶದ ಅಭಿವೃದ್ಧಿಗೂ ಪ್ರಜೆಗಳ ಕ್ಷೇಮಕ್ಕೂ ತೋರ್ಪಡಿಸುತ್ತಿರುವ ಆಸಕ್ತಿಯೇ ಕಾರಣವಾಗಿರುತ್ತೆ. ಈ ಸಂದರ್ಭದಲ್ಲಿ *Sugar is sweet all round* ಎಂಬ ಇಂಗ್ಲೀಷು ವಚನವು ಬಹು ಯುಕ್ತವಾಗಿದೆ.

ತಾವು ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಸಂಚಾರಮಾಡಿ, ಅಲ್ಲಲ್ಲಿ ಸಭೆ ಸೇರಿಸಿ, ಪ್ರಜೆಗಳ ಸಂಪದಭಿವೃದ್ಧಿ ವಿಷಯವಾಗಿ ಸಲಹೆಗಳನ್ನೂ ಬುದ್ಧಿವಾದಗಳನ್ನೂ ಹೇಳಿದ್ದಲ್ಲದೆ, ಸಂಚಾರದಲ್ಲಿ ತಮ್ಮ ಅನಲೋಕನಕ್ಕೆ ಬಂದಂಥ ಲೋಪಗಳ ವಿಷಯದಲ್ಲಿಯೂ ಇತರ ವಿಷಯದಲ್ಲಿಯೂ ತಾವು ಆಯಾ ಇಲಾಖಾ ಮೊಖ್ತೇಸರರುಗಳಿಗೆ ಅವರವರ ಕರ್ತವ್ಯವನ್ನು ಕುರಿತು ಬರೆಯಿಸೋಣವಾಗಿದೆ. ಇದಕ್ಕೆಲ್ಲ ನಾವು ಬಹಳ ಕೃತಜ್ಞರಾಗಿದ್ದೇವೆ.

ನಾವುಗಳು ಇಲ್ಲಿಗೆ ಬರುವಾಗ ಮೈಸೂರು ಷಹರಿನಲ್ಲಿ ಪ್ಲೆಗಿನ ಭಯವಿತ್ತು ; ಆದಾಗ್ಯೂ ಮೆಂಬರುಗಳು ಇಳಿಯುವದಕ್ಕೆ ಎಂದಿನಂತೆ ತಕ್ಕ ವಿಪರ್ಾಡುಗಳನ್ನು ಮಾಡಿ ಬೇಕಾದ ಸೌಕರ್ಯವನ್ನುಂಟುಮಾಡಿ ಕೊಟ್ಟಿರುವದಲ್ಲದೆ, ಸೆಕ್ರಿಟೆರಿಯವರೇ ಈ ವರ್ಷ ಖುದ್ದಾಗಿ ನಾವುಗಳಿರುವ ಸ್ಥಳಕ್ಕೆ ದಯೆಮಾಡಿ ನಮ್ಮ ಯೋಗಕ್ಷೇಮಗಳ ವಿಚಾರಣೆ ತೆಗೆದುಕೊಂಡದ್ದರಿಂದಲೂ, ತಾವು ರೆಪ್ರಿಸೆಂಟೆಟಿವ್ಸ್ ಆಟ್ ಹೋಮಿಗೆ ದಯೆಮಾಡಿಸಿದ್ದರಿಂದಲೂ ನಮಗಳಿಗೆ ಬಹಳ ಗೌರವವನ್ನು ಉಂಟು ಮಾಡಿದಂತಾಯಿತು. ಇದಕ್ಕಾಗಿ ನಾವು ಬಹಳ ಕೃತಜ್ಞರಾಗಿದ್ದೇವೆ.

ಪ್ರಜೆಗಳ ವಿನಯ ಪೂರ್ವಕವಾದ ವಿಜ್ಞಾಪನೆಗಳನ್ನೂ ತಮ್ಮ ರಾಜ್ಯಾಡಳಿತದಲ್ಲಿ ಅವರಿಗುಂಟಾಗಿರುವ ಸಂತೋಷವನ್ನೂ ಕುರಿತು. ನಮ್ಮ ಶ್ರೀಮನ್ಮಹಾರಾಜರವರಿಗೂ ಯುವರಾಜರವರಿಗೂ ತಿಳಿಸಬೇಕೆಂದು ಕೋರುತ್ತೇನೆ".

Mr. H. Krishnasastri.—Mr. Amble Annaiya Pandit and Mr. C. Vasudeva Rao have already dwelt upon the Economic Conference and on many other important subjects. Now, I think it my duty to say a few words, on behalf of the raiyat population, concerning a subject of no less importance.

We are gratified that the long standing question of improving the minor tanks has come to a final settlement under your regime. It is satisfactory to one and all that you have started this useful scheme of improving such tanks with the sole object of providing facilities to the agricultural class. This beneficent scheme will, no doubt, bring many a tank to restoration and materially improve the condition of the raiyat, and we are highly thankful to you for this benevolent act.

As the majority of the Assembly have come forward to vote for the levy of the Income Tax, it may be taken to have received the consent of all. Though this tax was bound to form sooner or later an addition to the revenues of the State, it is a great concession that you should make a generous promise that this item of revenue would be solely utilized for improving the education of His Highness' subjects, and we are highly thankful for it.

As a result of the Village Improvement Scheme inaugurated in the country, it will no doubt not be long before all the villages will grow to be towns and I can assure you, sir, that all the subjects of His Highness will earnestly work in unison to secure the success of the scheme.

Last year, while referring to the popular expression of sympathy and devotion towards you, you remarked that it was natural that people should take a kind view of the first year's administration. But, the continuance of that sentiment indicates that it springs from an appreciation of your patriotic and whole hearted devotion to the welfare of your country and the happiness of your fellow countrymen. The saying that *sugar is sweet all round* would be appropriate in this case.

In your tour throughout the Province you were pleased not only to convene meetings of leading gentlemen in the locality and give them suggestions and instructions as to their economic progress but also to issue orders to the heads of various departments, suggesting remedial measures to be adopted by them for removing

the defects that came to your notice. We beg to express our heartfelt thanks to you for this act of kindness.

There was great fear of an out-break of plague in the City of Mysore when we came here to attend the Dasara festivities but we are glad to say that excellent arrangements had been made for providing us with safe lodgings and other conveniences as usual. We consider it a great honour done to us that the Secretary to Government was pleased to personally visit our lodgings, and enquire after our welfare and above all that Your Excellency was pleased to grace the "At Home party by the Representatives" with your kind presence. We all feel highly obliged to you for this act of complacency.

In conclusion, Sir, I humbly request that you may be pleased to convey to His Highness the Maharaja and to His Highness the Yuvaraja the humble prayers of their loyal subjects and their entire satisfaction in your administration of the country.

ದಿವಾ ಸಾಹೇಬರವರು ಅಪ್ಪಣೆ ಕೊಡಿಸಿದ ಅಭಿಪ್ರಾಯದ ಸಾರಾಂಶ.

ಸಭಾಸದರಾದ ಮಹಾಶಯರೆ ! ನೀವುಗಳು ತುಂಬ ವಾಕ್ಚಟುತ್ವದಿಂದ ನಿಮ್ಮ ರಾಜಭಕ್ತಿವಿಶ್ವಾಸಗಳನ್ನು ವಿಶದವಾಗಿ ತಿಳಿಯಪಡಿಸಿದ ಸಂಗತಿಯನ್ನು ಶ್ರೀಮನ್ಮಹಾರಾಜಾ ಸಾಹೇಬ್ಬಹಾದುರವರ ಸನ್ನಿಧಿಯಲ್ಲಿ ವಿಜ್ಞಾಪಿಸುವುದು ನಮಗೆ ಕೇವಲಸಂತೋಷಕರವಾದ ಕರ್ತವ್ಯವಾಗಿರುತ್ತದೆ. ಹಾಗೆಯೇ, ಶ್ರೀಮದ್ಯುವರಾಜರವರ ವಿಷಯದಲ್ಲಿ ನೀವು ಭಕ್ತಿಪೂರ್ವಕವಾಗಿ ಒಪ್ಪಿಸಿದ ವಂದನೆಗಳನ್ನು ಅವರಿಗೆ ವಿಜ್ಞಾಪಿಸುವುದೂಕೂಡ ನಮಗೆ ಆನಂದವನ್ನುಂಟುಮಾಡುತ್ತದೆ. ರಾಜ್ಯಾಡಳಿತದ ವಿಷಯದಲ್ಲಿ ನೀವು ಮಾಡಿರುವ ಶ್ಲಾಘನೆಗಳಿಗಾಗಿ ನಿಮಗೆ ವಂದಿಸುತ್ತೇವೆ. ಆದರೆ ಈ ಸಂವತ್ಸರದಲ್ಲಿ ನಡೆವ ಪ್ರಯೋಜನಕರಗಳಾದ ಕೆಲಸಗಳಿಗೋಸ್ಕರ ಸಲ್ಲಬೇಕಾದ ಕೀರ್ತಿ ಗೌರವಗಳಿಗೆ ಮುಖ್ಯವಾಗಿ ಕೌನ್ಸಿಲ್ ಮೆಂಬರುಗಳೂ, ಇಲಾಖಾ ಮೊಖ್ತೇಸರರೂ ಡೆಪ್ಯುಟಿ ಕಮಿಷನರುಗಳೂ ಭಾಗಿಗಳಾಗಿರುತ್ತಾರೆ.

ಸಭೆಯ ಕೆಲಸವು ಪ್ರಾರಂಭವಾಗಿ ಈ ಹೊತ್ತಿಗೆ ಪೂರ್ತಿಯಾಗಿ ಬಂದು ವಾರವಾಯಿತು. ತಾವು ಅನೇಕ ಮುಖ್ಯ ವಿಷಯಗಳನ್ನು ಕುರಿತು ಚರ್ಚೆಗಳನ್ನುನಡಿಸಿ ಉಪಯುಕ್ತವಾದ ಅನೇಕ ಸಂಗತಿಗಳನ್ನು ಸರ್ಕಾರದವರ ತಿಳಿವಳಿಕೆಗೆ ತಂದಿರುತ್ತೀರಿ. ಈ ಸಭೆಯ ವಿಷಯವನ್ನು ನಾವುಗಳ್ಳರೂ ಪದೇ ಪದೇ ನೆನಸಿಕೊಂಡು ಸಂತೋಷಪಡುವುದರಲ್ಲಿ ಸಂದೇಹವಿಲ್ಲ, ಆದರೆ ಚರ್ಚೆಗಳನ್ನು ಸಂಕೋಚ ಮಾಡಬೇಕೆಂದು ನಾವು ತಮಗೆ ಪದೇ ಪದೇ ಎಚ್ಚರಿಸುತ್ತಿದ್ದ ಸಂಗತಿಯನ್ನು ಮನಸ್ಸಿನಲ್ಲಿಡದೆ ಮೀರಿತುಬಿಡಬೇಕೆಂಬುದು ನಮ್ಮ ಕೋರಿಕೆಯಾಗಿದೆ. ಫಲಾನಾ ವಿಷಯಗಳನ್ನು ಸಲಹೆಮಾಡಿದ ಮೆಂಬರುಗಳ ಗೈರ್‌ಹಾಜರಿಯಿಂದಲಾಗಲಿ, ಅಥವಾ ಇತರ ಕಾರಣದಿಂದಲಾಗಲಿ, ಅಂಥಾ ಯಾವ ವಿಷಯಗಳನ್ನೂ ಚರ್ಚೆಗೆ ತೆಗೆದುಕೊಳ್ಳದೆ ಬಿಡಕೂಡದೆಂಬುದು ನಮ್ಮ ಆಶಯವಾಗಿದ್ದದ್ದರಿಂದ; ಬಂದೊಂದು ವಿಷಯವನ್ನು ಇಷ್ಟೇ ಹೊತ್ತು ಚರ್ಚೆಮಾಡಬೇಕೆಂದು ಕಾಲಕ್ಲುಪ್ತಿಯನ್ನು ಮಾಡಬೇಕಾಯಿತು. ಹಾಗೆ ಮಾಡದೆ ಹೋಗಿದ್ದರೆ, ಅಷ್ಟು ಮುಖ್ಯವಲ್ಲದ ಸಾಧಾರಣ ವಿಷಯಗಳ ಚರ್ಚೆಯಲ್ಲಿಯೇ ಪ್ರಾಯಶಃ ಬಹುಕಾಲವು ಕಳೆದುಹೋಗಿ, ಆಖೈರಿನಲ್ಲಿ ಚರ್ಚೆಗಳನ್ನು ತ್ವರೆಪಡಿಸಬೇಕಾಗುತ್ತಿತ್ತು, ಇಲ್ಲವೇ ಅನೇಕ ವಿಷಯಗಳನ್ನು ಚರ್ಚಿಸದೇ ಬಿಟ್ಟುಬಿಡಬೇಕಾಗುತ್ತಿತ್ತು.

ಚರ್ಚೆಗೆ ತರಲ್ಪಟ್ಟ ಮುಖ್ಯ ವಿಷಯಗಳ ಪೈಕಿ ಪ್ರೆಸ್ ಆಕ್ಟಿನ ಬದಲಾವಣೆಯು ಬಹಳ ಮುಖ್ಯವಾದದ್ದಾಗಿರುತ್ತದೆ. ಇಂಥಾ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಇದು ಸರಿಯಾದ ಕಾಲವಲ್ಲವೆಂಬುದು ತಮಗೂ ತಿಳಿದೇ ಇದೆಯೆಂದು ನಂಬುತ್ತೇವೆ.

ಪ್ರಜಾಪ್ರತಿನಿಧಿ ಸಭೆಯಲ್ಲಿ ಇನ್ನೂ ಬದಲಾವಣೆಗಳಾಗಬೇಕೆಂದು ಸಲಹೆಯಾಗಿರುವ ವಿಚಾರದಲ್ಲಿ, ಆ ವಿಷಯವನ್ನು ಅಭಿನಂದನ ಪತ್ರಿಕೆಗಳಿಗೆ ಕೊಟ್ಟ ಜವಾಬಿನಲ್ಲಿ ಆಗಲೇ ಸೂಚಿಸಿಯಿದೆ. ಈಗ ಸಂಸ್ಥಾನದಲ್ಲಿ ಮೂರು ಸಭೆಗಳಿರುತ್ತವೆ. ಅವುಗಳಲ್ಲಿ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಮೆಂಬರರಾಗಿರುತ್ತಾರೆ. ನಿಮಗೆ ಬೇಕಾದವುಗಳನ್ನು ಕುರಿತು ಅಂಥಾ ಸಭೆಗಳಲ್ಲಿ ಕೇಳಿಕೊಳ್ಳಬಹುದಾಗಿದೆ. ಈಗ ನಿಮಗಿರುವಂಥಾ ಅಧಿಕಾರಗಳನ್ನು ಸಂಸ್ಥಾನದ ಶಾಶ್ವತವಾದ ಪ್ರಯೋಜನಕ್ಕಾಗಿ ಚಲಾಯಿಸುತ್ತಾ ಬರುವ ಪಕ್ಷಕ್ಕೆ ಆವಶ್ಯಕವಾದ ಎಲ್ಲಾ ಅಧಿಕಾರಗಳೂ ಕಾಲ ಕ್ರಮದಲ್ಲಿ ನಿಮಗೆ ಒದಗಿ ಬರುವುವೆಂಬುದರಲ್ಲಿ ಸಂದೇಹವಿಲ್ಲ.

ಇನಾಂ ಗ್ರಾಮಗಳಿಗೆ ಸರ್ವೆ ಸೆಟ್ಲ್‌ಮೆಂಟನ್ನು ಜಾರಿಗೆ ತರುವ ವಿಚಾರದಲ್ಲಿ, ವೃತ್ತಿದಾರರ ಪೈಕಿ ಮೂರರಲ್ಲಿ ಎರಡು ಭಾಗದಷ್ಟು ಜನರು ಅಥವಾ ಮುಕ್ಕಾಲುಪಾಲು ಜನರು ಒಪ್ಪುವ ಭಾಗದಲ್ಲಿ, ಸರ್ವೆ ಸೆಟ್ಲ್‌ಮೆಂಟನ್ನು ಮಾಡಿಸಲೇ ಬೇಕೆಂಬ ನಿರ್ಬಂಧವನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗಬಹುದು. ಈ ವಿಷಯವನ್ನು ಕುರಿತು ಆಮೂಲಾಗ್ರವಾಗಿ ಪರಿಶೀಲನೆ ಮಾಡುವುದಕ್ಕಾಗಿ, ಇನಾಂದಾರರಿಗೂ ಅವರ ರೈತರುಗಳಿಗೂ ಪ್ರತಿನಿಧಿಗಳಾಗಿರಲು ಅರ್ಹರಾದ ಜನಗಳು ಸೇರತಕ್ಕಂಥಾ ಒಂದು ಕಮಿಟಿಯನ್ನು ಏರ್ಪಡಿಸಲಾಗುತ್ತದೆಯೆಂದು ಶ್ರೀಮನ್ಮಹಾರಾಜರವರ ಸರ್ಕಾರದವರ ಪರವಾಗಿ ಆಗಲೇ ವಾಗ್ದಾನ ಮಾಡಿರುತ್ತೇವೆ.

"ಚೇಂಬರ್ ಆಫ್ ಕಾಮರ್ಸ್" ಎಂಬ ವ್ಯಾಪಾರದ ಸಂಘವನ್ನು ಸ್ಥಾಪಿಸಬೇಕೆಂದು ತಿಪಟೂರಿನ ಮೆಂಬರು ಕೇಳಿದರು. ಅಂಥಾ ಕಮಿಟಿಯು ಈ ದೇಶಕ್ಕೆ ಅತ್ಯವಶ್ಯಕವಾಗಿ ಬೇಕಾಗಿದೆ ಎಂಬುದನ್ನು ನಾವು ಒಪ್ಪುತ್ತೇವೆ. ಆದರೆ ಇದು ಬೆಂಗಳೂರು, ಮೈಸೂರು ಮೊದಲಾದ ಮುಖ್ಯ ವ್ಯಾಪಾರ ಸ್ಥಳಗಳಲ್ಲಿ ಮುಖಂಡರಾದ ವರ್ತಕರು ಉಪಕ್ರಮಿಸತಕ್ಕ ಕಾರ್ಯವಾಗಿರುತ್ತದೆ. ಸರ್ಕಾರದವರು ಇದಕ್ಕೆ ಬೇಕಾದ ಎಲ್ಲಾ ಸೌಲಭ್ಯಗಳನ್ನೂ ಒದಗಿಸಿ ಕೊಡುವರೆಂಬುದರಲ್ಲಿ ಸಂದೇಹವಿಲ್ಲ.

ಮಹಮ್ಮದೀಯರ ವಿದ್ಯಾಭ್ಯಾಸಕ್ಕೆ ಅವಶ್ಯಕವಾದ ಎಲ್ಲಾ ಸಲಕರಣೆಗಳನ್ನೂ ಸರ್ಕಾರದವರು ಒದಗಿಸಿ ಕೊಟ್ಟು ಇರುತ್ತಾರೆ. ಇನ್ನೂ ಒದಗಿಸಿಕೊಡುವುದಕ್ಕೂ ಸಿದ್ಧರಾಗಿದ್ದಾರೆ. ಆದರೆ, ಮಹಮ್ಮದೀಯರು ಸಂಸ್ಥಾನದ ದೇಶಭಾಷೆಯನ್ನು ಚಾಲ್ತಿ ಕೆಲಸಕ್ಕೆ ಬೇಕಾಗುವಷ್ಟರಮಟ್ಟಿಗೆ ಕಲಿತುಕೊಳ್ಳುವುದೂ, ಸಂಸ್ಥಾನದಲ್ಲಿರುವ ಇತರ ಜನಾಂಗದವರೊಡನೆ ಒಗ್ಗಟ್ಟಿನಿಂದ ಸೇರಿ ಕೆಲಸ ಮಾಡಲು ಪ್ರಯತ್ನಿಸುವುದೂ ಸಹ, ಆ ಜನಗಳ ಕ್ಷೇಮಕ್ಕೆ ಒಳ್ಳೆಯದು.

ಈ ಸಂಸ್ಥಾನಕ್ಕೆ ಒಂದು ಯೂನಿವರ್ಸಿಟಿಯನ್ನು ಸ್ಥಾಪಿಸಬೇಕೆಂಬ ವಿಷಯವನ್ನು ಸರ್ಕಾರದವರು ಬಹು ಕುತೂಹಲದಿಂದ ಆಲೋಚಿಸುತ್ತಿದ್ದಾರೆ. ಇನ್ನು ಮೂರು ನಾಲ್ಕು ತಿಂಗಳೊಳಗಾಗಿ ಈ ವಿಷಯವು ತೀರ್ಮಾನಕ್ಕೆ ಬರಬಹುದೆಂದು ನಿರೀಕ್ಷಿಸಿರುತ್ತೇವೆ.

ಇನಾಂದಾರರಿಗೆ ಕೇಂದಿ ಹುಟ್ಟುವಳಿಗೆ ಇರುವ ಹಕ್ಕಿನ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಈ ವಿಷಯವು ಜಾಗ್ರತೆಯಲ್ಲಿಯೇ ಸರಿಯಾದ ವ್ಯವಸ್ಥೆಗೆ ಬರಬಹುದೆಂದು ನಿರೀಕ್ಷಿಸಲಾಗಿದೆ.

ಮರಹಮ್ಮತ್ ಕಾಮಗಾರಿಗಳ ವಿಷಯದಲ್ಲಿ, ಸುವರ್ಣಾವತೀ ಮತ್ತು ಲೋಕಪಾವನೀ ನದಿಗಳ ತೀರಗಳಲ್ಲಿರುವ ಪ್ರದೇಶಗಳಲ್ಲಿ ಕೆರೆಯನ್ನು ಕಟ್ಟುವ ಏರ್ಪಾಟನ್ನೂ, ನಾಲೆಗಳನ್ನು ತೆಗಿಸುವ ಏರ್ಪಾಟನ್ನೂ, ಮುಂದಿನ ವರ್ಷ ಆಲೋಚನೆಗೆ ತೆಗೆದುಕೊಳ್ಳಲಾಗುವುದೆಂದು ಹೇಳಬಹುದಾಗಿದೆ. ಭದ್ರಾ ನದಿಗೆ ಅಣೆಯನ್ನು ಕಟ್ಟುವ ವಿಷಯವನ್ನೂ ಮರೆಯುವುದಿಲ್ಲ.

ಸರ್ಕಾರೀ ಲೈಫ್ ಇನ್ಷೂರೆನ್ಸಿನ ಪ್ರಯೋಜನಗಳು ಪ್ರಜಾ ಸಾಮಾನ್ಯಕ್ಕೆಲ್ಲಾ ಲಭಿಸುವಂತೆ ಮಾಡುವ ವಿಷಯವನ್ನು ಸಮರ್ಥರಾದ ನಮ್ಮ ಕಂಟ್ರೋಲರ್ ಮಿ॥ ಚಕ್ರವರ್ತಿಯವರು ಪರಿಶೀಲನೆ ಮಾಡುತ್ತಿದ್ದಾರೆ. ವಿಶೇಷವಾದ ಕಷ್ಟಗಳೇನೂ ಬಾರದೇ ಇರುವ ಪಕ್ಷಕ್ಕೆ ಅವರು ಈ ಏರ್ಪಾಟನ್ನು ಜಾಗ್ರತೆಯಾಗಿಯೇ ಜಾರಿಯಲ್ಲಿತರುವಂತೆ ತಕ್ಕ ಪ್ರಯತ್ನವನ್ನು ಮಾಡುವರು.

ಲೋಕಲ್ ಮತ್ತು ಮ್ಯುನಿಸಿಪಲ್ ಬೋರ್ಡುಗಳ ವಿಚಾರದಲ್ಲಿ, ಸರ್ಕಾರೀ ಅಧಿಕಾರಸ್ಥರಲ್ಲದ ಅನೇಕ ದೊಡ್ಡ ಮನುಷ್ಯರನ್ನು ಒಳಗೊಂಡಿರುವ ಒಂದು ಕಮಿಟಿಯವರು ಈ ವಿಷಯವನ್ನು ಆಮೂಲಾಗ್ರವಾಗಿ ಪರಿಶೋಧಿಸಿ, ತಮ್ಮ ಪರ್ಯಾಲೋಚನೆಗಳನ್ನು ಈಗತಾನೆ ಪೂರೈಸಿರುತ್ತಾರೆಂದು, ಚರ್ಚೆಗಳು ನಡೆದ ಸಮಯದಲ್ಲಿ ಆಗಲೇ ತಿಳಿಸಿರುತ್ತೇವೆ.

ಕಳಸದ ದೇವಸ್ಥಾನದ ಹಣದ ಪೈಕಿ ಕೆಲವು ಭಾಗವನ್ನು ಸ್ಥಳೀಯ ರೈಲ್ವೆಯನ್ನು ಹಾಕುವುದಕ್ಕೂ ಮತ್ತು ಕೆಲವು ಭಾಗವನ್ನು ಆ ಊರನ್ನೂ ದೇವಸ್ಥಾನವನ್ನೂ ಅಭಿವೃದ್ಧಿಗೆ ತರುವ ಕೆಲಸಗಳಿಗೂ ಉಪಯೋಗಿಸಬಹುದೆಂದು ನಮಗೆ ತೋರುತ್ತದೆ. ಆ ಪೈಕಿ ಸ್ವಲ್ಪ ಹಣವನ್ನು ಸಂಸ್ಕೃತ ಭಾಷಾಭ್ಯಾಸದ ಪ್ರೋತ್ಸಾಹಕ್ಕಾಗಿಯೂ ಸಹ ಉಪಯೋಗಿಸಬಹುದು.

ಒಂದು ತಾಲ್ಲೂಕಿಗೆ ಸಂಬಂಧಪಟ್ಟ ವಿಷಯಗಳನ್ನೆಲ್ಲಾ ಒಂದು ಪಟ್ಟಿಯಲ್ಲಿ ಬರೆದು, ಅವುಗಳನ್ನು ಕುರಿತು ಆಲೋಚನೆ ಮಾಡುವುದಕ್ಕಾಗಿ, ಸಾಧ್ಯವಾದರೆ, ಆರು ತಿಂಗಳಿಗೆ ಒಂದಾವೃತ್ತಿಗೆ ಕಮ್ಮಿಯಿಲ್ಲದಂತೆ ಡಿಸ್ಟ್ರಿಕ್ಟ್ ಕಮಿಟಿಗಳನ್ನು ನಡಿಸುವುದು ಯುಕ್ತವೆಂದು ತೋರುತ್ತದೆ. ಹೀಗೆ ಮಾಡಿದರೆ ಆಯಾ ಸ್ಥಳಕ್ಕೆ ಸಂಬಂಧ

ಪಟ್ಟ ವಿಷಯಗಳನ್ನು ಆಯಾ ಸ್ಥಳಗಳ ಆಫಿಸರುಗಳೂ ಜನಗಳೂ ಸೇರಿ ಕೂಡಲೆ ಫೈಸಲ್ಮಾಡುವುದಕ್ಕೆ ಅವ ಕಾಶವುಂಟಾಗುತ್ತದೆ. ಈ ವಿಷಯವನ್ನು ಡೆಪ್ಯುಟಿ ಕಮಿಷನರುಗಳೂಡನೆ ಕಲೆತು ಪರ್ಯಾಲೋಚನೆ ಮಾಡ ಬಹುದು, ಅವರು ಜವಾಬ್ದಾರಿಯನ್ನು ವಹಿಸಲು ಮನಸುಳ್ಳವರಾಗಿರುವಂತೆ ಕಾಣುತ್ತದೆ.

ಗ್ರಾಮಾಭಿವೃದ್ಧಿಯ ವಿಷಯದಲ್ಲಿ, ಹೋದ ವರ್ಷ ನೀವ್ರಗಳು ಮಾಡಿದ ವಾಗ್ದಾನಗಳನು ಸರಿಯಾಗಿ ನಡಿಸಿರುವುದನ್ನು ನೋಡಿ ನಮಗೆ ಸಂತೋಷವಾಗುತ್ತದೆ. ಈ ವಿಷಯದ ನಿಯಮಗಳ ಮೇರೆಗೆ ಜನಗಳು ನಡೆದುಕೊಳ್ಳದೆ ತಪ್ಪಿದರೆ ಅವರಿಗೆ ಶಿಕ್ಷೆಮಾಡಬೇಕೆನ್ನುವುದನ್ನಾಗಲೀ, ಅಥವಾ ಅವರಿಂದ ಬಲಾತ್ಕಾರ ವಾಗಿ ಅದರಂತೆ ಕೆಲಸ ಮಾಡಿಸಬೇಕೆನ್ನುವುದನ್ನಾಗಲೀ, ಅನುಮೋದಿಸಲು ಸದ್ಯಕ್ಕೆ ನಮಗೆ ತಾತ್ಪರ್ಯವಿಲ್ಲ. ಆ ನಿಯಮಗಳಂತೆ ನಡೆಯದೆ ತಪ್ಪಿದವರ ಹೆಸರುಗಳನ್ನು ಬಂದು ಪಟ್ಟಿಯಲ್ಲಿ ಬರೆದು, ಅದನ್ನು ಅಮಲ್ದಾರರಿಗೆ ಕಳುಹಿಸಿದರೆ, ಅಥವಾ, ಅವಶ್ಯವಾದಲ್ಲಿ, ಗ್ರಾಮದ ಚಾವಡಿಯಲ್ಲಿ ಸದರಿ ಪಟ್ಟಿಯನ್ನು ಚಿಕಟಾಯಿಸಿದರೆ ಸಾಕೆಂದು ತೋರುತ್ತದೆ.

ಈ ವಿಷಯದಲ್ಲಿ ಡೆಪ್ಯುಟಿ ಕಮಿಷನರುಗಳೂ ರೆವಿನ್ಯೂ ಆಫೀಸರುಗಳೂ ಕೇವಲ ಮುತ ವರ್ಜಿಯನ್ನು ವಹಿಸುವುದು ತುಂಬಾ ತೃಪ್ತಿಕರವಾಗಿದೆ. ಮುಖಂಡರಾದವರೂ, ಇತರ ಜನಗಳೂ, ಈ ಒಳ್ಳೇ ಕಾರ್ಯದಲ್ಲಿ ಆಸಕ್ತಿಯನ್ನು ಬಂದೇ ಸಮವಾಗಿ ಇಟ್ಟುಕೊಂಡಿದ್ದರೆ, ಬಹು ಕ್ಷಿಪ್ರದಲ್ಲಿಯೇ ಈ ಸಂಸ್ಥಾನವಲ್ಲಿ ಅನೇಕ ಮೇಲ್ಪಜ್ತಿಗೆ ಅರ್ಹವಾದ ಗ್ರಾಮಗಳು ವಿಭಾಡುವುವು.

ದಿವಾ ಬಹದ್ದೂರ್ ಮಿ॥ ಕೆ. ಪಿ. ಪುಟ್ಟಣ್ಣ ಶೆಟ್ಟಿಯವರು, ಷಹರಿನಲ್ಲಿಯೂ, ಊರಿನಲ್ಲಿಯೂ, ಹಳ್ಳಿಯ ಲ್ಲಿಯೂ ಕಸಬುದಾರಿ ಕೆಲಸಗಳನ್ನೂ ಇತರ ಕೆಲಸಗಳನ್ನೂ ಕ್ರಮಪಡಿಸುವ ವಿಷಯವನ್ನು ಕುರಿತು ಈ ಸಭೆ ಯ ಮುಖಂಡರಾದ ಅನೇಕ ಮೆಂಬರುಗಳೊಡನೆ ಪ್ರಸ್ತಾಪಿಸಿರುತ್ತಾರೆ. ಮುಖ್ಯವಾಗಿ ಪರಸ್ಪರ ಸಹಾಯ ಕ ಪ್ರಯತ್ನಗಳಿಗೆ ಪ್ರೋತ್ಸಾಹವನ್ನು ಕೊಟ್ಟು ಇನ್ನೂ ಹೆಚ್ಚು ಪ್ರಯೋಜನಕರವಾದ ಪದ್ಧತಿಗಳ ಮತ್ತು ಅಭ್ಯಾಸಗಳ ಪೈಕಿ ಕೆಲವನ್ನು ಬಂದು ಗೊತ್ತಾದ ಪ್ರಮಾಣಕ್ಕೆ ತಂದು, ದೇಶದ ಜನರಲ್ಲಿ ಉದ್ಯೋಗ ಶೀಲತೆ ಯನ್ನು ಅಭಿವೃದ್ಧಿಗೆ ತರುವುದಕ್ಕೆ ಈಗ ಸಂಸ್ಥಾನದಲ್ಲಿ ನಡೆಯುತ್ತಿರುವ ಎಲ್ಲಾ ಕೆಲಸಗಳನ್ನೂ ಕಸಬುಗ ಳನ್ನೂ ಯಾವುದಾದರೂ ಬಂದು ಕ್ರಮಕ್ಕೆ ಬಳಪಡಿಸಿ, ಪತೋಟಿಯಲ್ಲಿಟ್ಟು ಅವುಗಳಿಗೆ ಉತ್ತೇಜನವುಂಟಾಗು ವಂತೆ ಮಾಡಬೇಕೆಂಬುದೇ ಈ ಪ್ರಯತ್ನದ ಉದ್ದೇಶವಾಗಿರುತ್ತದೆ. ಎಲ್ಲರೂ ಒಟ್ಟು ಸೇರಿ ಕೆಲಸಮಾ ಡುವ ಸಾಮರ್ಥ್ಯವಿಲ್ಲದೆ ಇರುವುದೇ ಈಗಿನ ಜನಗಳಲ್ಲಿರುವ ದೊಡ್ಡ ನ್ಯೂನತೆಯಾಗಿರುತ್ತದೆ.

ಇರ್ಕಂ ಟ್ಯಾಕ್ಸನ್ನು ಹಾಕಬೇಕೆಂತ ನೀವೇ ಕೇಳಿರುವುದು ಶ್ರೀಮನ್ಮಹಾರಾಜರವರ ಸರ್ಕಾರಕ್ಕೆ ಬಹು ತೃಪ್ತಿಕರವಾದ ಅಂಶವಾಗಿರುತ್ತದೆ. ಮತ್ತು ಮೈನರ್ ಕೆರೆಗಳ ವಿಷಯದಲ್ಲಿ ನೀವುಗಳೂ ಸಹಾಯವನ್ನು ಮಾಡು ವುದಾಗಿ ವಾಗ್ದಾನ ಮಾಡಿರುವುದು ನಿಮ್ಮ ಜನೋಪಕಾರಬುದ್ಧಿಗೆ ಶ್ಲಾಘನೆಯನ್ನುಂಟುಮಾಡುತ್ತದೆಯಲ್ಲದೆ ಸರ್ಕಾರದವರಿಗೂ ಪ್ರೋತ್ಸಾಹಕರವಾಗಿರುತ್ತದೆ. ನೀವುಗಳೂ ಇಂಥಾ ಕೆಲಸವನ್ನು ಮಾಡುತ್ತಾ ಬಂದರೆ ಪರಸ್ಪರ ನಂಬಿಕೆಯು ಹೆಚ್ಚು ವುದಲ್ಲದೆ, ಸರ್ಕಾರದವರೊಡನೆ ಪ್ರಜೆಗಳು ಏಕೀಭವಿಸಿ ಕೆಲಸ ಮಾಡುವುದು ಅವ ಶ್ಯವಾಗಿರುವಂಥಾ ಅನೇಕ ಕಾರ್ಯಗಳಿಗೆ ಪ್ರೋತ್ಸಾಹವುಂಟಾಗುತ್ತದೆ. ಮೈನರ್ ಕೆರೆಗಳ ವಿಷಯದಲ್ಲಿ ಆ ದಿವೆಸ ನಿಮ್ಮ ಮುಂದೆ ಪ್ರಸ್ತಪಿಸಿದ ಸಲಹೆಗಳನ್ನು ಶ್ರೀಮನ್ಮಹಾರಾಜರವರು ಮಂಜೂರ್ಮಾಡಲು ಸಿದ್ಧರಾಗಿದ್ದಾ ರೆಂಬ ವಿಷಯವನ್ನು ನಿಮಗೆ ತಿಳಿಸಬೇಕೆಂದು ಆಜ್ಞಾಪಿಸಿರುತ್ತಾರೆ.

ಇಂಡಿಯಾ ಸರ್ಕಾರದವರು ತಮ್ಮ ಆಫಿಸರುಗಳನ್ನು ನಮ್ಮ ಸಂಸ್ಥಾನದಲ್ಲಿ ಕೆಲಸ ಮಾಡುವುದಕ್ಕೆ ಎರ ವಲಾಗಿ ಕಳುಹಿಸುವುದರಿಂದಲೂ, ಇತರ ವಿಧದಿಂದಲೂ, ನಮ್ಮಮೇಲೆ ಅಭಿಮಾನವಿಟ್ಟು ನಮಗೆ ಸಹಾಯ ಮಾಡುತ್ತಾ ಇದ್ದಾರೆ. ಸಂಸ್ಥಾನದಲ್ಲಿ ಪ್ರಯೋಜನಕರವಾದ ಎಲ್ಲಾ ವಿಧವಾದ ಉದ್ಯೋಗಗಳನ್ನೂ ಕ್ರಮ ಪಡಿಸಿ ವೃದ್ಧಿಗೆ ತರುವುದಕ್ಕೂ, ಈ ಸಂಸ್ಥಾನದ ಪ್ರಜೆಗಳ ಬುದ್ಧಿಕುಶಲತೆಯನ್ನೂ, ಚಮತ್ಕಾರವನ್ನೂ, ಸುಶಿಕ್ಷ ಣವನ್ನೂ, ದ್ರವ್ಯ ಸಂಪಾದಕ ಶಕ್ತಿಯನ್ನೂ ಹೆಚ್ಚಿಸುವಂಥಾ ಪ್ರತಿಯೊಂದು ಪರಸ್ಪರ ಸಹಾಯಕ ಪ್ರಯತ್ನ ವನ್ನೂ ಪ್ರೋತ್ಸಾಹಿಸುವುದಕ್ಕೂ ಸಹ ಮಾಡಬೇಕಾದ ಎಲ್ಲಾ ಪ್ರಯತ್ನಗಳನ್ನೂ ಆದರಪೂರ್ವಕವಾಗಿ ನಡಿಸ ಬೇಕೆಂದು ಶ್ರೀಮನ್ಮಹಾರಾಜರವರು ಕುತೂಹಲವುಳ್ಳವರಾಗಿರುತ್ತಾರೆ.

ಈ ಸಂಸ್ಥಾನದಲ್ಲಿರುವ ಯೂರೋಪಿಯರ್ಸ್, ಹಿಂದೂ ಮತ್ತು ಮಹಮ್ಮದೀಯರೇ ಮೊದಲಾದ ಸಮಸ್ತ ಪ್ರಜೆಗಳೂ ಸಮ್ಮೇಳದಿಂದ ಕೆಲಸಮಾಡಿ, ಈ ಸತ್ಕಾರ್ಯದಲ್ಲಿ ಭಾಗಿಗಳಾಗಿ, ಶ್ರೀಮನ್ಮಹಾರಾಜರವರ ದಿವ್ಯ ಚಿತ್ತದಲ್ಲಿ ನೆಲಸಿರುವ ವಾಂಛೆಗಳನ್ನು ನೆರವೇರಿಸುವಂತೆ ಮಾಡುವರೆಂದು ನಾವು ಹಾರೈಸುತ್ತೇವೆ.

The Session of the Dasara Representative Assembly came to a close on Wednesday the 7th October 1914 with some concluding observations by the Dewan of which the following is a summary:—

Gentlemen, it will give me great pleasure to convey to His Highness the Maharaja the sentiments of devotion and loyalty to which you have given such eloquent expression. It will give me no less pleasure to convey your loyal greetings to His Highness the Yuvaraja. I thank you also for the kind words of appreciation with which you have spoken of the administration, but you must allow me to add that the Members of Council, Heads of Departments and the Deputy Commissioners, are sharers in the fullest measure of any credit that may be due for good work done during the year.

We have had a full week's session including the opening day. Many important subjects have been discussed and much valuable information placed before Government. I have no doubt we will all carry with us pleasant memories of the session but I earnestly hope you will forget the frequent appeals I had to make to you in order to curtail the discussions. As I was anxious that no subjects should be passed over either on account of the absence of the proposer or other causes, I have had to observe a time limit in regard to individual subjects. Had I not done so, perhaps we might have lost much valuable time in unimportant discussions and been compelled in the end to hurry through or abandon a large number of subjects.

Chief among the important subjects brought up for discussion was the modification of the Press Act. I believe you are as well aware as I am that the present is not an opportune moment to take up such a question.

The suggested further reforms in the Representative Assembly have already been referred to in my reply to the Addresses. There are now three Assemblies in the country on which elected representatives of the people have found seats and at which you could press your wants. If you continue to use your existing privileges for the permanent good of the State, I have no doubt all needful privileges will come to you in good time.

Turning to the subject of Survey Settlement in alienated villages, I may remark that, if two-thirds or three-fourths of the number of *Vrittidars* consent, it may be possible to introduce the Survey Settlement compulsorily. I have already on behalf of His Highness's Government promised the appointment of a Committee of enquiry on which persons qualified to represent both the inamdars and their tenants might be represented.

The member from Tiptur asked for the formation of a "Chamber of Commerce." I agree that such an institution is very much needed in the country. It is however a matter in which the initiative should come from the leading tradesmen of Bangalore, Mysore and other commercial centres. Government will of course be prepared to give every facility.

As regards Mahomedan education, Government have given and are prepared to give all reasonable facilities, but in their own interests, the Mahomedan communities should acquire a working knowledge of the language of the State and endeavour to work in unison with other communities in the State.

The question of a University for Mysore is engaging our earnest attention. We may expect to come to a decision in three or four months' time.

The claim of the inamdars to toddy revenue is also engaging our attention and I hope a satisfactory settlement will soon be reached.

As regards Public Works, I may promise that the tank and channel projects in the Suvarnavati and the Lokapavani valleys will receive attention in the coming year. The interests of the Bhadra Project will not be forgotten.

The question of extending to the public the benefits of State Life Insurance is in the capable hands of our Comptroller Mr. Chakravarti. If we do not meet with any great difficulties, he will doubtless see the scheme put through with all expedition.

As regards Local and Municipal Boards, I have already said in the course of the discussions that a Committee which included several non-official gentlemen has just concluded its deliberations after an exhaustive examination of the whole question.

It seems to me that the funds of the Kalasa temple may be partly invested on local railways and partly expended on the town and temple of Kalasa. A small sum might also be utilised for encouraging the study of Sanskrit.

It seems desirable that all the subjects concerning a taluk should be catalogued and, if possible, District Conferences held to consider progress not less often than once in six months. It will give an opportunity for the settlement of many local subjects by the officers and the people immediately concerned This idea will be further worked out in consultation with the Deputy Commissioners who seem willing to undertake the responsibility.

As regards the Village Improvement Scheme, I am glad to observe that the promises you gave last year have been so handsomely fulfilled. For the present, I am not inclined to support penal or coercive measures if the people fail to comply with the provisions of the scheme. It seems sufficient if lists of defaulters are sent to the Amildars and, if necessary, also posted in the Village *Chavadi.*

It is a matter for special satisfaction that the Deputy Commissioners and the Revenue officers are taking such an enthusiastic interest in the scheme. If the leaders and the people maintain their interests in this good work, it may not be long before we shall have many model villages in the country.

Dewan Bahadur Mr. K. P. Puttanna Chetty has met and addressed many leading members of this Assembly in the matter of the regulation of the professional and other activities in city, town and village. The object is to bring all activities and professions in the country under some sort of regulation, control and stimulating influence, chiefly to encourage co-operative effort and to standardise some of the more beneficent practices and habits and promote business-life in the country. The great defect of the present day population is lack of capacity for concerted action.

It is a matter for great satisfaction to His Highness' Government that you have come forward with a request for the levy of Income Tax, and your promise of co-operation in regard to minor tanks is creditable to your public spirit and encouraging to Government. Such acts on your side will increase mutual confidence and stimulate work in many directions, in which the co-operation of the people with Government is so necessary. His Highness the Maharaja has commanded me to announce that he is prepared to sanction the proposals in connection with the minor tanks which were placed before you the other day.

The Government of India have been giving us their sympathy and help by lending us their officers and in other ways. His Highness the Maharaja is anxious that earnest efforts should be put forth to regulate and develop all beneficent activities in the State and stimulate every co-operative effort calculated to increase the intelligence, skill, refinement and earning power of his people.

I hope that all classes of people in the country, whether Europeans, Hindus or Mahomedans, will work in unison and actively participate in this good work and fulfil these cherished wishes of His Highness the Maharaja.